ಎತ್ತಿದ ಹೂವಾಯ್ತು, ಇಂಥವರ ಪ್ರಭಾವದಿಂದ.

ತಮ್ಮ ಕಾಲದ ಸಾಹಿತ್ಯದ ಸಂಸಾರದಲ್ಲಿ ಹೆಚ್ಚಾಗಿ ನುಡಿಯದೆ ತಮ್ಮ ನಂಬಿಕೆಯಂತೆ ನೇರವಾಗಿ ನಿರಕ್ಕಾಗಿ ನಡೆದು, ಮುಚ್ಚಿದ ವೀಣೆಯಂತೆ ಒಳಗೆ ಇದ್ದು, ಪರಿಮಳದಂತೆ ದಾಟಿ ಹೋದವರು ಯಜಮಾನ ವೆಂಕಣ್ಣಯ್ಯನವರು. ಇವರು ಸದಾ ವಸಂತ; ಇವರಿಗೆ ನಿತ್ಯೋತ್ಸವ, ಜನನ, ಮರಣ, ಜನ್ಮ ಜನ್ಮಾಂತರಗಳೆಲ್ಲ ಇಂಥ ಶಕ್ತಿ ಪುರುಷರು ದಾಟುವ ಸೇತುಗಳು. ಇಂಥವರು ಆಗಾಗ ಬರುತ್ತಾರೆ; ಬಂದು ಸಾಮಾನ್ಯ ಸುಲಭವಲ್ಲದ ಕೆಲಸವನ್ನು ಒಂದು ಬೆರಳಿನಿಂದ ಮಾಡಿಬಿಡುತ್ತಾರೆ. ವಜ್ರದ ಬಳ್ಳಿಯಂಥ ಆ ಬೆರಳಿಗೆ ಕೀರ್ತಿಗೂ ಮಿಗಿಲಾದ ಧನ್ಯತೆ ಸಹಜವಾದ ಉಂಗುರವಾಗುತ್ತದೆ''.

ವೆಂಕಣ್ಣಯ್ಯನವರ ವ್ಯಕ್ತಿತ್ವವೇ ಹೀಗೆ. ಸೂಜಿಗಲ್ಲಿನಂತೆ ಕ್ಷಣಕಾಲ ಕಂಡವರನ್ನು ಅದು ಆಕರ್ಷಿಸಿ ಬಿಡುತ್ತಿತ್ತು.

ವೆಂಕಣ್ಣಯ್ಯನವರು ಅಧ್ಯಾತ್ಮದಲ್ಲಿ ಸಾಕಷ್ಟು ಮುಂದುವರಿದಿದ್ದರೂ, ಅವರ ದೃಷ್ಟಿ ಸಂಪ್ರದಾಯ ಸೀಮಿತವಾಗಿರಲಿಲ್ಲ. ಒಮ್ಮೆ ವೆಂಕಣ್ಣಯ್ಯನವರ ಬಾಲ್ಯದಲ್ಲಿ ನೆರವಿತ್ತ ಅವರ ಬಂಧುಗಳೊಬ್ಬರು ಅವರ ಮನೆಗೆ ಬಂದರು. ಅವರು ವೆಂಕಣ್ಣಯ್ಯನವರನ್ನು ಕಾಮಧೇನು ಎಂದು ಕರೆದು, ಅವರ ಖರ್ಚಿನಲ್ಲಿ ಮಡದಿಯೊಡನೆ ಕಾಶೀಯಾತ್ರೆ ಮುಗಿಸಿದರು. ಆ ಮೂಕಪ್ರಾಣಿಯ ಕೆಚ್ಚಲಿನಲ್ಲಿ ಇನ್ನೂ ಹಾಲಿದೆ ಎಂದು ಭ್ರಮಿಸಿ ಆ ಯಾತ್ರೆಯ ಸಮಾರಾಧನೆಯನ್ನು ವೆಂಕಣ್ಣಯ್ಯನವರ ನೆರವಿನೊಂದಿಗೆ ಮಾಡಬೇಕೆಂದು ಮೈಸೂರಿಗೆ ಬಂದಿಳಿದರು. ಅವರು ಬಂದುದು ತಿಂಗಳ ಮಧ್ಯಭಾಗದಲ್ಲಿ, ಅವರ ಕಾಮಧೇನುವಿನ ಕೆಚ್ಚಲು ತುಂಬಿಕೊಳ್ಳಲು ಇನ್ನೂ 15 ದಿವಸ ಬೇಕಾಗಿತ್ತು. ಆದ್ದರಿಂದ ಅವರು ತಮ್ಮ ಮಡದಿಯೊಡನೆ ಕಾಮಧೇನುವಿನ ಕೊಟ್ಟಿಗೆಯಲ್ಲಿಯೇ ಠಿಕಾಣಿ ಹಾಕಿದರು.

ವೆಂಕಣ್ಣಯ್ಯನವರನ್ನು ಅನುಸರಿಸಿ, ಅನುಕರಿಸಿ ಮನೆಯಲ್ಲಿದ್ದವರೆಲ್ಲರೂ ಅವರನ್ನು ದೊಡ್ಡಪ್ಪ, ದೊಡ್ಡಮ್ಮ ಎಂದು ಕರೆಯುತ್ತಿದ್ದರು. ಇಂಥ ದೊಡ್ಡಪ್ಪನವರು ಮನೆಗೆ ಬಂದಿಳಿದ ಒಂದು ಗಂಟೆಯೊಳಗಾಗಿ ಮನೆಯ



ಸರ್ವಾಧಿಕಾರಿಯಾದರು. ನಾಲ್ಕು ದಿನ ಉರುಳುವಷ್ಟರಲ್ಲಿ ಅವರೊಬ್ಬ ಹಿಟ್ಲರ್ ಆದರು. 'ಅವನು ಸ್ನಾನ ಮಾಡದೆಯೇ ಕಾಫಿ ಕುಡಿದ. ಇವನು ಸಂಧ್ಯಾವಂದನೆ ಮಾಡಲಿಲ್ಲ, ಊಟಕ್ಕೆ ಮುಂಚೆ ಹಣೆಗೆ ಗಂಧಾಕ್ಷತೆ ಹಚ್ಚಿಕೊಳ್ಳಲಿಲ್ಲ. ಅವಳು ಸೊಟ್ಟ ಬೈತಲೆ ತೆಗೆದುಕೊಂಡಿದ್ದಾಳೆ. ಕುಂಕುಮ ಕಾಣಿಸುತ್ತಲೇ ಇಲ್ಲ. ಬಟ್ಟಲನ್ನು ಕಚ್ಚಿಕೊಂಡು ನೀರು ಕುಡೀತಾ ಇದಾರಲ್ಲ, ಅಯ್ಯೋ ಅಯ್ಯೋ ಕೊಂಗರ ಹಾಗೆ ಮುಂಜುಟ್ಟು ಬಿಟ್ಟಿದ್ದಾನೆ' ಇತ್ಯಾದಿ ಇತ್ಯಾದಿ ಆಕ್ಷೇಪಣೆ ಮಾಡುತ್ತಿದ್ದರು. ಒಂದು ದಿನ ವೆಂಕಣ್ಣಯ್ಯನವರ ತಮ್ಮ ಮುಖಕ್ಷೌರ ಮಾಡಿಕೊಂಡಿದ್ದನ್ನು ಕಂಡಾಗಲಂತೂ ಅವರ ಕೋಪ ದಳ್ಳುರಿಯಾಯಿತು. 'ಪ್ರಾತ್ಯ' ಎಂದು ಅವನನ್ನು ಬೈದು, 'ನೀನು ಸಹಪಂಕ್ತಿಗೆ ಅಯೋಗ್ಯ' ಎಂದು ಬಿಟ್ಟರು. ಇವೆಲ್ಲವೂ ವೆಂಕಣ್ಣಯ್ಯನವರ ಗಮನಕ್ಕೆ ಬರುತ್ತಿದ್ದವಾದರೂ, ಅವರು 'ಪಾಪ, ಅವರು ಸಂಪ್ರದಾಯಶೀಲರು. ಮಡಿವಂತಿಕೆ ಹೆಚ್ಚು. ಈ ವಯಸ್ಸಿನಲ್ಲಿ ಅವರನ್ನು